ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಈ ಕಾರ್ಖಾನೆಯು ಜಯನಗರ ೭ನೇ ಬ್ಲಾಕಿನಲ್ಲಿರುವ ಎಮ್. ಎಮ್. ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಸ್ಥಾಪಿತವಾಗಿದೆ. ಜಯನಗರ ೪ನೇ ಬ್ಲಾಕಿನಲ್ಲಿರುವುದಿಲ್ಲ. ಈ ಕಾರ್ಖಾನೆಯು ವಾಯು ವಾಲಿನ್ಯದಿಂದ ಆಕ್ಕಪಕ್ಕದ ನಿವಾಸಿಗಳಿಗೆ ಆಗಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಕಾರ್ಖಾನೆಗೆ ಅನೇಕ ಬಾರಿ ತಿಳುವಳಿಕೆ ಪತ್ರ (ಸೂಚನಾ ಪತ್ರ) ಕೊಟ್ಟಿದ್ದರೂ ಸಹಾ ವಾಯು ವಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಿರುವುದಿಲ್ಲ. ಇನ್ನು ಒಂದು ತಿಂಗಳೊಳಗೆ ಘಟಕಗಳನ್ನು (ವಾಯುವಾಲಿನ್ಯ ನಿಯಂತ್ರಣ) ಅಳವಡಿಸ ದಿದ್ದದ್ದಲ್ಲಿ ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ಕಾಯ್ದೆ ೧೯೮೧ರ ಪ್ರಕಾರ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಕಾರ್ಖಾನೆಗೆ ಆದೇಶ ನೀಡಲಾಗಿದೆ.

ಬೆಂಗಳೂರು ಜಯನಗರದಲ್ಲಿ ಕುಡಿಯುವ ನೀರಿನ ಕೊಳವೆಗಳು ಒಡೆದು ಹೋಗಿರುವ ಬಗ್ಗೆ

೬೩೭ ಶ್ರೀ ರಾಮಲಿಂಗಾರೆಡ್ಡಿ (ಜಯನಗರ)—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರಿನ ಜಯನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಕೊಳವೆಗಳು ಒಡೆದು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇದರಿಂದ ವ್ಯಾಪಕವಾಗಿ ನೀರು ಪೋಲಾಗುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ನೀರು ಸೋರುವಿಕೆಯ ಬಗ್ಗೆ ವರದಿ ಮಾಡಿದಾಗ ಅಥವಾ ಗಮನಕ್ಕೆ ಬಂದಾಗ ಅದನ್ನು ಸರಿಪಡಿಸಲು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕ್ರಮ ಕೈಗೊಳ್ಳಲಾಗುವುದು.

ರಾಜ್ಯ ಪೋಲೀಸ್ ಇಲಾಖೆಯ ಗುಪ್ತ ದಳಕ್ಕೆ ನೇರ ನೇಮಕಾತಿ

೬೧೪ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯ ಗುಪ್ತ (ಇಂಟಲಿಜೆನ್ಸ್) ದಳದಲ್ಲಿರುವ ಪೋಲೀಸ್ ಅಧಿಕಾರಿಗಳ ಸಂಖ್ಯೆ ಎಷ್ಟು (ದರ್ಜೆವಾರು ಹಾಗೂ ಜಿಲ್ಲಾವಾರು ವಿವರಗಳನ್ನು ನೀಡುವುದು):

ಆ) ಈ ಅಧಿಕಾರಿಗಳು ಪೋಲೀಸ್ ಗುಪ್ತ ದಳದಿಂದ ನೇರ ನೇಮಕಾತಿ ಮಾಡಲ್ಪಟ್ಟವರೇ ಅಥವಾ ಪೋಲೀಸ್ ಇಲಾಖೆಯಿಂದ ಎರವಲು ಸೇವೆಯ ಮೇಲೆ ಬಂದವರೇ ?

ಇ) ವಿಶೇಷ ತರಬೇತಿ ಪಡೆದ ಅಭ್ಯರ್ಥಿಗಳನ್ನು ಗುಪ್ತ ದಳಕ್ಕೆ ನೇರ ನೇಮಕ ಮಾಡಿಕೊಳ್ಳಲು ಸರ್ಕಾರ ಯೋಚಿಸಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ರಾಜ್ಯ ಗುಪ್ತವಾರ್ತೆ ವಿಭಾಗ — ೬೦೯
ನಗರ/ಜಿಲ್ಲಾ ವಿಶೇಷ ದಳ — ೪೨೩

(ಪ್ರತ್ಯೇಕವಾದ ವಿವರವನ್ನು ಲಗತ್ತಿಸಲಾಗಿದೆ).

ಆ) ಗುಪ್ತವಾರ್ತೆ ವಿಭಾಗವು ಪೋಲೀಸ್ ಇಲಾಖೆಯ ಒಂದು ಅಂಗವಾಗಿರುವುದರಿಂದ ಪ್ರತಿನಿಯೋಜನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ಇಲ್ಲ